# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 654 |
| ಸದಸ್ಯರ ಹೆಸರು | : | ಶ್ರೀ ಬಸವರಾಜ ಪಾಟೀಲ್ ಇಟಗಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 12.03.2020 |
| ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಯಚೂರು ನಗರದ ಯರಮರಸ್ ಪ್ರದೇಶ ಕ್ಲಬ್‌ನಲ್ಲಿ ಜೂಜಾಟ (ಇಸ್ಪೀಟ್) ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಯಚೂರು ನಗರದ ಯರಮರಸ್ ಪ್ರದೇಶದಲ್ಲಿ ಯಾವುದೇ ಅನಧಿಕೃತ ಜೂಜಾಟ(ಇಸ್ಪೀಟ್) ಕ್ಲಬ್‌ಗಳನ್ನು ತೆರೆದಿರುವುದಿಲ್ಲ. ಮಾನ್ಯ ಉಚ್ಚ ನ್ಯಾಯಾಲಯ, ಕಲಬುರಗಿ ಸರ್ಕ್ಯೂಟ್ ಬೆಂಚ್ ರಿಟ್ ಪಿಟಿಷನ್ ನಂಬರ್ 207054/2014ರ ಪ್ರಕಾರ ಮತ್ತು Company Act Registered Under the Companies Act 1956ರ ಅಡಿಯಲ್ಲಿ ಡಿವಿಆರ್ ರಿಕ್ರಿಯೇಷನ್ ಕ್ಲಬ್ ಮತ್ತು ಮಾನ್ಯ ಉಚ್ಚ ನ್ಯಾಯಾಲಯ ಕಲಬುರ್ಗಿ ಬೆಂಚ್, ಕಲಬುರ್ಗಿ ರವರ ರಿಟ್ ಪಿಟಿಷನ್ ನಂಬರ್ 204363/2018ರ ಪ್ರಕಾರ ಶ್ರೀ ನಂದಿ ಸ್ಪೋರ್ಟ್ಸ್ ಮತ್ತು ಸೋಷಿಯಲ್ ಅಸೋಸಿಯೇಷನ್ ಕ್ಲಬ್‌ಗಳನ್ನು ರಾಯಚೂರು ನಗರದ ಯರಮರಸ್ ಪ್ರದೇಶದಲ್ಲಿ ಪ್ರಾರಂಭಿಸಲಾಗಿದೆ. |
| (ಆ) | ಈ ಕ್ಲಬ್ ಅಂತರ ರಾಜ್ಯ ಕ್ಲಬ್ ಆಗಿ ಮಾರ್ಪಟ್ಟಿದ್ದು, ಇಲ್ಲಿಗೆ ತೆಲಂಗಾಣ ಮತ್ತು ಆಂಧ್ರ, ಕರ್ನಾಟಕದ ಜೂಜುಗಾರರು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಯಚೂರು ನಗರದ ಯರಮರಸ್ ಪ್ರದೇಶದಲ್ಲಿ (1) ಡಿ.ವಿ.ಆರ್. ರಿಕ್ರಿಯೇಷನ್ ಕ್ಲಬ್ ಮತ್ತು (2) ಶ್ರೀ ನಂದಿ ಸ್ಪೋರ್ಟ್ಸ್ ಮತ್ತು ಸೋಷಿಯಲ್ ಅಸೋಸಿಯೇಷನ್ ಕ್ಲಬ್‌ಗಳಿಗೆ ಮಾನ್ಯ ಉಚ್ಚ ನ್ಯಾಯಾಲಯದ ಕಲಬುರ್ಗಿ ಬೆಂಚ್ ರವರ ರಿಟ್ ಅರ್ಜಿಯಲ್ಲಿ ನೀಡಿದ ನಿರ್ದೇಶನ, ಷರತ್ತುಗಳ ಅಡಿಯಲ್ಲಿ ಸದಸ್ಯರಾದಂತಹ ತೆಲಂಗಾಣಾ ಮತ್ತು ಆಂಧ್ರಪ್ರದೇಶದ ಜನರು ಬರುತ್ತಿರುತ್ತಾರೆ. |
| (ಇ) | ಬಂದಿದ್ದಲ್ಲಿ, ಇದರ ನಿಯಂತ್ರಣಕ್ಕೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು? | ಸದರಿ ಕ್ಲಬ್‌ಗಳಲ್ಲಿ ಮಾನ್ಯ ಉಚ್ಚ ನ್ಯಾಯಾಲಯ ನೀಡಿದ ನಿರ್ದೇಶನ, ಆದೇಶ ಮತ್ತು ಷರತ್ತುಗಳು ಪಾಲನೆಯಾಗುತ್ತಿವೆ ಎಂಬುದನ್ನು ಖುದ್ದು ಪಂಚರ ಸಮಕ್ಷಮದಲ್ಲಿ ಪಂಚನಾಮೆ ಪೂರೈಸಿದ್ದು ಮತ್ತು ಸದರಿ ಕ್ಲಬ್‌ನಲ್ಲಿ ಯಾವುದೇ ಅಕ್ರಮ ಚಟುವಟಿಕೆ ನಡೆಯದಂತೆ ನಿಗಾವಹಿಸಿದ್ದು, ಮಾನ್ಯ ನ್ಯಾಯಾಲಯವು ನೀಡಿದ ಆದೇಶ ಮತ್ತು ಷರತ್ತುಗಳು ಉಲ್ಲಂಘನೆಯಾಗದಂತೆ ನೋಡಿಕೊಳ್ಳುತ್ತಿದ್ದು, ಈ ಹಿಂದೆ ಉಲ್ಲಂಘನೆ ಮಾಡಿದ ಹಿನ್ನಲೆಯಲ್ಲಿ ಕಾನೂನು ಪ್ರಕಾರ ಪ್ರಕರಣ ದಾಖಲಿಸಿ ಕ್ರಮ ಕೈಕೊಂಡಿದ್ದು, ಮುಂದೆಯು ಸಹ ಯಾವುದೇ ಅಕ್ರಮ ಚಟುವಟಿಕೆಗಳು ಕಂಡು ಬಂದಲ್ಲಿ ಸೂಕ್ತ ನಿಗಾವಹಿಸಲಾಗುವುದು. |

ಹೆಚ್‌ಡಿ 92 ಎಸ್‌ಎಸ್‌ಟಿ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು